

ಮೇರಿಗೆ ಒಂದು ಗ್ರಾಂ ರೇಡಿಯಂ ಕಳುಹಿಸಲು ಅಮೆರಿಕ ಸಿದ್ಧಪಡಿಸಿದ ಸಾಧನ



ಮೇರಿಯ ಪ್ರಯೋಗಾಲಯ




ಮೇರಿ ಮತ್ತು ಪಿಯೆರಿ ಕ್ಯೂರಿ ಸಮಾಧಿ

ಸಮಾಧಿ. ಇಬ್ಬರು ಹೋಗಿ ವೀಕ್ಷಿಸುತ್ತಾ ನಿಲ್ಲುವಷ್ಟು ಜಾಗ. ನೋಡಿ ಧನ್ಯರಾದೆವು.

ಅಲ್ಲಿ ಫ್ರೆಂಚ್ ಮಹಿಳೆಯೊಬ್ಬರು ತಮ್ಮ ಇಬ್ಬರು ಹೆಣ್ಣುಮಕ್ಕಳನ್ನು ಕರೆತಂದಿದ್ದರು. ನಾವು ಅವರ ಪರಿಚಯ ಮಾಡಿಕೊಂಡೆವು. ನಾವು ಆಸ್ಟ್ರೇಲಿಯಾದಿಂದ ಬಂದಿರುವುದು ಅವರಿಗೆ ನಂಬಲಾರದ ಆಶ್ಚರ್ಯ. 'ನನ್ನ ಮಗಳು ಶಾಲೆಯಲ್ಲಿ ಕೆಮಿಸ್ಟ್ರಿ ಓದಬಯಸಿದ್ದಾಳೆ. ಅದಕ್ಕೆ ಕರೆತಂದೆ' ಎಂದರು.

'ಲ ಪ್ಯಾಂಥಿಯಾನ್'ಗೆ ಹತ್ತಿರದಲ್ಲೇ ಮೇರಿ ಕ್ಯೂರಿ ಸ್ಥಾಪಿಸಿದ 'ಲ ಇನ್‌ಸ್ಟಿಟ್ಯೂಟ್ ಕ್ಯೂರಿ' (La Institute Curie) ಇದೆ. ಅಲ್ಲಿಗೆ ನಾವು ಮರುದಿನ ಹೋಗುವ ಕಾರ್ಯಕ್ರಮವಿತ್ತು. ಹಾಗೆಯೇ ಹಾದು ಬಸ್ ಹಿಡಿಯಲು ಹೊರಟೆವು. ಇನ್‌ಸ್ಟಿಟ್ಯೂಟ್ ಮುಂದೆ ಓರ್ವ ಭಾರತೀಯ ಯುವತಿ. ಪರಿಚಯ ಮಾಡಿಕೊಂಡೆವು. ಆಕೆ ದೆಹಲಿಯವಳು. ಇಲ್ಲಿ ಪಿಎಚ್.ಡಿ.ಗಾಗಿ ಸಂಶೋಧನೆ ನಡೆಸುತ್ತಿದ್ದಾಳೆ. ಅವಳ ಗಂಡ ಲೂಯಿ ಪ್ಯಾಶ್ಚರ್ ಸಂಸ್ಥೆಯಲ್ಲಿ ಅಧ್ಯಯನ ನಡೆಸುತ್ತಿದ್ದಾನೆ. ಒಂದು ಮಗು ಬೇರೆ. ಆಕೆ ಹೇಳಿದಳು: 'ಇಲ್ಲಿ ರಿಸರ್ಚ್ ಮಾಡಿದರೆ ಅಂತರರಾಷ್ಟ್ರೀಯ ಮಟ್ಟದ ಮಾರ್ಗದರ್ಶಿಗಳು ಸಿಗುತ್ತಾರೆ. ನಮ್ಮ ಅಧ್ಯಯನಕ್ಕೆ ಬೆಲೆ ಇರುತ್ತದೆ. ಹಾಗೆಂದೇ ಇಲ್ಲಿಗೆ ಬಂದಿದ್ದೇವೆ. ನಾವಿಬ್ಬರೂ ಕೆಲಸ ಮಾಡುತ್ತಿದ್ದು ಮಗು ಇರುವುದರಿಂದ, ಫ್ರೆಂಚ್ ಸರ್ಕಾರ ನಮಗೆ ದಾದಿಯ ನೆರವನ್ನು ನೀಡಿದೆ. ನಮ್ಮ ಮಗು ಮನೆಯಲ್ಲಿ ದಾದಿಯ ಜೊತೆಗಿದೆ ಈಗ'. ಇಂತಹ ಸೌಕರ್ಯ ಎಲ್ಲಿ ಸಿಕ್ಕೀತು ಎಂದುಕೊಂಡೆವು. ಅಡ್ಡಾಡಿದ ನಂತರ ಮ್ಯಾಕ್ ಡೊನಾಲ್ಡಿಗೆ ಕಾಫಿ ಕುಡಿಯಲು ಹೋದಾಗ ಆ ಯುವತಿ ತನ್ನ ಗೆಳತಿಯೊಡನೆ ಕಾಫಿ ಹೀರುತ್ತಾ ಕುಳಿತಿದ್ದಳು, ಸಂಜೆ ಏಳರಲ್ಲಿ!

## ಲ ಇನ್‌ಸ್ಟಿಟ್ಯೂಟ್ ಕ್ಯೂರಿ

ಪಿಯೆರಿ ಕ್ಯೂರಿಯನ್ನು ಸೊರ್ಬಾನ್ ವಿಶ್ವವಿದ್ಯಾಲಯ ಪ್ರೊಫೆಸರ್ ಆಗಿ ನೇಮಿಸಿಕೊಂಡಾಗ ಆತನಿಗೆ ಸೂಕ್ತ ಪ್ರಯೋಗಾಲಯವನ್ನು ನೀಡಿರಲಿಲ್ಲ. ನೊಂದ ಪಿಯೆರಿ ತನ್ನದೇ ಸಂಸ್ಥೆಯನ್ನು ಆರಂಭಿಸುವ ಗುರಿಯನ್ನು ಹೊಂದಿದ್ದ. ಫಲಿಸಲಿಲ್ಲ. ಅವನ ಅಕಾಲ ಮರಣದ ನಂತರ ಮೇರಿ ಅದೇ ಪ್ರೊಫೆಸರ್ ಹುದ್ದೆಯನ್ನು ಅಲಂಕರಿಸಿದಳು. ಆಕೆಗೂ ಪ್ರಯೋಗಾಲಯವಿಲ್ಲ! ಆಗ ಮೇರಿ ಸೊರ್ಬಾನ್ ವಿ.ವಿ.ಯನ್ನು ಬಿಡುವ ಬೆದರಿಕೆ ಹಾಕಿ ತನ್ನದೇ ಸಂಸ್ಥೆಯನ್ನು ತೆರೆಯಲು ಮುಂದಾದಳು. ಆಗ ವಿಶ್ವವಿದ್ಯಾಲಯ ಮೇರಿ ಮತ್ತು ಕ್ಲಾಡಿಯಸ್ ರೆಗಾಡ್ ಇಬ್ಬರಿಗೂ ಅನುದಾನವನ್ನು ನೀಡಿ ಎರಡು ಸಂಸ್ಥೆಗಳನ್ನು ಮಂಜೂರು ಮಾಡಿತು. ಹೀಗೆ 1921ರಲ್ಲಿ ರೂಪುಗೊಂಡಿತು 'ರೇಡಿಯಂ ಇನ್‌ಸ್ಟಿಟ್ಯೂಟ್'. ಕಾಲಕ್ರಮೇಣ ಅದು ಬೆಳೆದು ಇಂದು 'ಲ ಇನ್‌ಸ್ಟಿಟ್ಯೂಟ್ ಕ್ಯೂರಿ' ಎಂಬ ಮಹಾಸಂಸ್ಥೆಯಾಗಿ ಪರಿಣಮಿಸಿದೆ. ಇದರ ಒಂದು ಭಾಗವಾಗಿದೆ 'ಮೇರಿ ಕ್ಯೂರಿ ಮ್ಯೂಸಿಯಂ'.

ಮೇರಿ ಕ್ಯೂರಿ ಮ್ಯೂಸಿಯಂ ನೋಡಬಯಸಿದ ನಾವು ಅದರ ನಿರ್ದೇಶಕ ಡಾ. ಹುಯ್ಸ್ ರೆನಾಡ್ ಮತ್ತು ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ. ಪಿಯೆರ್ ಆನ್ ಹೌರಿ ಅವರನ್ನು ಸಂಪರ್ಕಿಸಿದ್ದೆವು. ನಮ್ಮ ಕೋರಿಕೆಯಂತೆ 'ಆಗಸ್ಟ್ 31ರಂದು ಬನ್ನಿ' ಅಂದರು. ಮ್ಯೂಸಿಯಂನ ವೆಬ್ ಪುಟವನ್ನು ನೋಡಿದಾಗ ಅದು ರಜಾನಂತರ ಸೆಪ್ಟೆಂಬರ್ 3ರಂದು ತೆರೆಯುವುದು ಎಂದಿತ್ತು. ನಮಗೆ ಅನುಮಾನ ಬಂತು – ನಿಜವಾಗಿ ಈ ಮ್ಯೂಸಿಯಂ ನೋಡುತ್ತೇವೆಯೇ ?

ಬೆಳಿಗ್ಗೆ ಎದ್ದು ಸರಿಯಾದ ಸಮಯಕ್ಕೆ ಅತ್ತ ಹೋದೆವು. ಲ ಪ್ಯಾಂಥಿಯಾನ್, ಸೋರ್ಬಾನ್ ವಿಶ್ವವಿದ್ಯಾಲಯ, ಲ್ಯಾಟಿನ್ ಕ್ವಾರ್ಟರ್ ಮುಂತಾದುವೆಲ್ಲಾ ಹತ್ತಿರವೇ ಇವೆ. ಅಲ್ಲಿ ಲೋಮಾಂಡ್ ಬೀದಿಯನ್ನು ನೋಡಿದಾಗ ನನ್ನ ಆನಂದಕ್ಕೆ ಪಾರವೇ ಇಲ್ಲ. ಇಲ್ಲಿಯೇ ಪಿಯೆರಿಯ ಕೊಠಡಿ ಮತ್ತು ಪ್ರಯೋಗಶಾಲೆಗಳು ಇದ್ದದ್ದು. ಇಲ್ಲಿಯೇ ಮೇರಿ ಪಿಯೆರಿಯನ್ನು ಪ್ರಥಮ ಬಾರಿಗೆ